‘ನನ್ನ ಮನೇಲಿ ಯಾರು ಇರ್ತಾರೆ, ಯಾರು ಇರಲ್ಲ ಅನ್ನೋದರ ಬಗ್ಗೆ ನಾನು ಯೋಚ್ನೆ ಮಾಡ್ಬೇಕು, ಬೇರೆಯವರಿಗೆ ಇದು ಸಂಬಂಧಿಸಿದ್ದಲ್ಲ’. ನನ್ನ ಗಂಟಲು ಒತ್ತಿ ಬಂದಿತ್ತು.

‘ಓಹ್, ನೀವು ತಪ್ಪು ತಿಳಿದಿರಿ! ಜನ ನಿಮ್ಮಿಬ್ಬರ ಬಗ್ಗೆ ನಾನಾ ರೀತಿಯಲ್ಲಿ ಮಾತನಾಡುತ್ತಿದ್ದಾರೆ, ಅದಕ್ಕೇ ನಾನು ಹೇಳಿದೆ’– ಅವಳು ಸ್ಪಷ್ಟೀಕರಣ ಕೊಟ್ಟಳು.

‘ಮಾತಾಡ್ಲಿ ಬಿಡಿ. ಮಾಡೋದಕ್ಕೆ ಕೆಲಸವಿಲ್ಲದವರು ಇಂಥದ್ದರ ಬಗ್ಗೆಯೇ ಚರ್ಚೆ ಮಾಡ್ತಾರೆ.’

‘ನೀವು ನಿಜವನ್ನೇ ಹೇಳಿದಿರಿ. ಆದ್ರೆ ಅವರಾದರೂ ಏನು ಮಾಡ್ತಾರೆ, ನಮ್ಮ ಸಮಾಜವೇ ಹೀಗಿದೆ.’


‘ಈ ಸಮಾಜವನ್ನು ನಿರ್ಮಿಸಿದವರು ನಾವೇ, ಇದೇನು ಆಕಾಶದಿಂದ ಸೃಷ್ಟಿಯಾಗಿ ಬಂದಿಲ್ಲ’, ನಾನು ರೇಗಿದ್ದೆ.

‘ಈಗ ಹೇಗಿದ್ದರೂ, ನಾವು ಇದೇ ಸಮಾಜದಲ್ಲಿ ಬದುಕಬೇಕಾಗಿದೆ’, ಅವಳು ಸೋಲೊಪ್ಪುತ್ತಿರಲಿಲ್ಲ.

‘ನೀವೇನು ಹೇಳಲು ಬಯಸುತ್ತೀರ? ಈ ಸಮಾಜಕ್ಕೆ ಬೇಡದವರು ಸಾಯಬೇಕೆ? ಆತ್ಮಹತ್ಯೆ ಮಾಡಿಕೊಳ್ಳಬೇಕೆ?’ ನಾನು ಇನ್ನಷ್ಟು ರೇಗಿದ್ದೆ.

‘ಹೀಗಂತ ನಾನ್ಯಾವಾಗ ಹೇಳಿದೆ? ನಿಮಗೆ ಮದುವೆ ಮಾಡಿಕೊಳ್ಳಲು ಇಷ್ಟವಿಲ್ಲದಿದ್ದರೆ, ಮಾಡಿಕೊಳ್ಳಬೇಡಿ, ಹೀಗೇ ಇರಿ’. ಅವಳು ಮುಖ ಸೊಟ್ಟಗೆ ಮಾಡಿದಳು.

‘ಸಾರಿ’ ನಾನು ವಿಷಯವನ್ನು ಅಲ್ಲಿಗೇ ನಿಲ್ಲಿಸಿದೆ. ಇನ್ನು ಈ ಕಥೆ ಗಲ್ಲಿಯ ವಿಷಯವಾಗಿ ಅನೇಕ ದಿನಗಳವರೆಗೆ ಇರುತ್ತದೆ ಎಂದು ಯೋಚಿಸಿ ಮನಸ್ಸಿಗೆ ಬೇಸರವಾಯಿತು. ನನ್ನ ನೆರೆಮನೆಯಂಥ ಮಹಿಳೆಯರಿಗೆ ಇಂಥ ವಿಷಯಗಳು ಬೇಕಾಗುತ್ತವೆ. ಒಂದು ವೇಳೆ ಸ್ವಾದಿಷ್ಟ ವಿಷಯವಾದರಂತೂ ಹೇಳುವುದೇ ಬೇಡ. ನೆರೆಮನೆಯವಳೊಂದಿಗೆ ನಡೆದ ಚರ್ಚೆಯ ಪ್ರಭಾವ ನನ್ನ ಯೋಚನೆಗಿಂತಲೂ ಹೆಚ್ಚು ಪರಿಣಾಮ ಬೀರಿತು. ಸುಮಾರು ಒಂದು ವಾರದ ನಂತರ ಅಕೌಂಟೆಂಟ್ ಜಿ.ಪಿ. ಸಿಕರವಾರರು ನನ್ನನ್ನು ತಮ್ಮ ಚೇಂಬರ್‌ಗೆ ಕರೆಸಿದರು. ಅವನ ಮುಖದಲ್ಲಿದ್ದ ಗಾಂಭೀರ್ಯವನ್ನು ನೋಡಿ ನನಗೆ ಭಯವಾಯಿತು. ಮೆಮೋ ಅಥವಾ ಶೋಕಾಸ್ ಕೊಡಬಹುದೇ? ಅಥವಾ ವರ್ಗಾವಣೆ...?



‘ಸಾರ್, ಏನ್ ವಿಷಯ?’ ನಾನು ಸಿಕರವಾರರನ್ನು ಕೇಳಿದೆ.

‘ಇದನ್ನು ಓದಿ’ ಸಿಕರವಾರರು ನನ್ನೆದುರು ಪತ್ರವೊಂದನ್ನು ಇಟ್ಟರು.

ನಾನು ಪತ್ರವನ್ನು ತೆಗೆದುಕೊಂಡೆ. ಅದು ದೂರು ಪತ್ರವಾಗಿತ್ತು. ವಿಷಯವನ್ನು ಹೀಗೆ ಬರೆಯಲಾಗಿತ್ತು

ಮಾನ್ಯರೇ, ನಿಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಸುಗಂಧಾ ಪರಮಾರರು ತಮ್ಮ ಕೆಟ್ಟ ಆಚರಣೆಯಿಂದಾಗಿ ಕಾಲೊನಿಯ ವಾತಾವರಣವನ್ನು ಹಾಳು ಮಾಡಿದ್ದಾರೆ. ಅವರ ಮನೆಗೆ ನೀತಿಗೆಟ್ಟ ಪುರುಷರು ಬಂದು ಹೋಗುತ್ತಿರುತ್ತಾರೆ. ನಾವು ನಿಮ್ಮಲ್ಲಿ ಕೈಜೋಡಿಸಿ ಪ್ರಾರ್ಥಿಸುವುದೇನೆಂದರೆ, ಕುಮಾರಿ ಸುಗಂಧಾರನ್ನು ಬೇರೆ ನಗರಕ್ಕೆ ವರ್ಗಾವಣೆ ಮಾಡಿ. ನಮ್ಮ ಮಕ್ಕಳು ಅವರ ಕೆಟ್ಟ ಆಚರಣೆಯಿಂದ ಪಾರಾಗಲಿ.

ಪ್ರಾರ್ಥಿಸುವವರು,

(ಮೊಹಲ್ಲಾದವರು ಸಹಿ ಮಾಡಿರುತ್ತಾರೆ.)

ದೂರುಪತ್ರವನ್ನು ಓದಿ ನನಗೆ ಆಶ್ಚರ್ಯ ಆಯಿತು. ಇದನ್ನು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ. ನಾನು ಪತ್ರವನ್ನು ಅದೇ ಟೇಬಲ್ ಮೇಲಿಟ್ಟೆ. ನನ್ನ ಬೆರಳುಗಳು ಕಂಪಿಸುತ್ತಿದ್ದವು, ಗಂಟಲು ಒಣಗಿತ್ತು.

‘ನೀವು ಚಿಂತಿಸಬೇಡಿ, ಹೀಗೆ ದೂರುಪತ್ರಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ಸಿಬ್ಬಂದಿಯನ್ನು ವರ್ಗಾವಣೆ ಮಾಡುತ್ತಾ ಹೋದರೆ, ನಮ್ಮ ಕಚೇರಿಯ ಕೆಲಸಕಾರ್ಯಗಳು ನಡೆದಂತೆಯೇ..! ಸುಗಂಧಾ ಅವರೇ, ಇಂಥ ವಿಷಯಗಳು ನನ್ನ ಕಿವಿಗೂ ಬಿದ್ದಿವೆ, ಅಂದ್ರೆ ನಿಮಗೆ ಒಬ್ಬರೊಂದಿಗೆ ಸಂಬಂಧವಿದೆ, ಅವರು ನಿಮ್ಮ ಮನೆಗೆ ಬಂದು ಹೋಗುತ್ತಿರುತ್ತಾರೆ. ಈ ಪತ್ರದ ನಂತರ ನೀವು ಎಚ್ಚರಿಕೆಯಿಂದಿರಬೇಕಾಗುತ್ತೆ’, ಸಿಕರವಾರರು ನನಗೆ ತಿಳಿಯಪಡಿಸಿದರು.

‘ನನ್ನ ಮನೆಗೆ ಕೆಟ್ಟವರು ಬರ್ತಿಲ್ಲ, ರಿತಿಕ್ ಮಾತ್ರ ಬರ್ತಾರೆ’ ನಾನು ಒಣ ಗಂಟಲಿನಿಂದಲೇ ಉತ್ತರಿಸಿದೆ.

‘ನನಗೆ ಗೊತ್ತಿದೆ, ಆದರೆ ಕೆಸರು ಎರಚುವವರ ಬಗ್ಗೆ ಏನು ಹೇಳೋದು? ನೀವು ಯಾರ್ಯಾರ ಬಾಯಿಯನ್ನು ಮುಚ್ಚಿಸ್ತೀರ? ಒಂದು ವೇಳೆ ಯಾವುದಾದ್ರು ಪತ್ರಿಕೆಯವರಿಗೆ ಗೊತ್ತಾದ್ರೆ, ತಲೆಬಿಸಿ ಹೆಚ್ಚಾಗುತ್ತೆ. ನೋಡಿ, ನಾನು ವಯಸ್ಸಿನಲ್ಲಿ ನಿಮಗಿಂತ ಹಿರಿಯವ, ಅದಕ್ಕೇ ನಿಮಗೆ ಸರಿಯಾದ ಅಭಿಪ್ರಾಯವನ್ನು ಹೇಳಲು ಬಯಸ್ತೀನಿ’, ಸಿಕರವಾರ್ ಹಿತೈಷಿಯಾಗುತ್ತಾ ಹೇಳಿದರು.

‘ನೀವೇ ಹೇಳಿ, ನಾನೇನು ಮಾಡ್ಲಿ? ನಾನು ರಿತಿಕ್‌ನೊಂದಿಗಿನ ಸಂಬಂಧವನ್ನು ಮುರಿದುಕೊಳ್ಳಲೇ? ಅವನು ನಮ್ಮ ಮನೆಗೆ ಬರ್ತಿರೋದು ಜನರಿಗೆ ಇಷ್ಟವಾಗಲ್ಲ ಅನ್ನೋ ಕಾರಣಕ್ಕೆ ಅವನ ಸಂಬಂಧವನ್ನು ಕಡಿದುಕೊಳ್ಳಲೇ?’ ನಾನು ನನ್ನೊಳಗಿನ ಸಿಟ್ಟನ್ನು ಹತ್ತಿಕ್ಕಿಕೊಳ್ಳುತ್ತಾ ಹೇಳಿದೆ.

‘ಬೇಡ, ನೀವು ಅವರೊಂದಿಗಿನ ಸಂಬಂಧವನ್ನು ಕಡಿದುಕೊಳ್ಳಬೇಡಿ, ಪ್ರತಿಯಾಗಿ ಸಂಬಂಧವನ್ನು ನೆಂಟಸ್ತಿಕೆಯಲ್ಲಿ ಬದಲಾಯಿಸಿಕೊಳ್ಳಿ’.

‘ಅಂದ್ರೆ?’

‘ಅಂದ್ರೆ, ನೀವು ಅವರನ್ನು ಮದುವೆಯಾಗಿ. ಒಂದೇ ಏಟಿಗೆ ಎಲ್ಲರ ಬಾಯಿ ಮುಚ್ಚತ್ತೆ.’ ಸಿಕರವಾರರು ನನಗೆ ಮಾರ್ಗವನ್ನು ಸೂಚಿಸಿದರು.

‘ವಾಹ್! ಇದೊಳ್ಳೆ ಚೆನ್ನಾಗಿದೆ. ಮದುವೆಯಾಗಿ ಅಂತ ಜನ ಹೇಳ್ತಾರೆ, ವಿಚ್ಛೇದನ ತೆಗೆದುಕೊಳ್ಳಿ ಅಂತ ಜನ ಹೇಳ್ತಾರೆ. ಜನ ಹೇಳ್ತಾರೆ ಅಂತ ನೀವು ಬದುಕಿರಿ; ಜನ ಹೇಳ್ತಾರೆ ಅಂತ ನೀವು ಸಾಯಿರಿ; ನನಗೆ ನನ್ನದೇ ಆದ ಜೀವನದ ಬಗ್ಗೆ ಹಕ್ಕಿದೆಯೋ, ಇಲ್ವೋ?’ ನಾನು ಸುಮಾರಾಗಿ ಕಿರುಚುತ್ತಾ ಹೇಳಿದೆ.

‘ಶಾಂತರಾಗಿರಿ ಸುಗಂಧಾ, ಶಾಂತರಾಗಿರಿ’.

‘ಏನ್ ಶಾಂತರಾಗಿರೋದು? ಜನ ನಾನು ಬದುಕೋದನ್ನ ಕಷ್ಟ ಮಾಡಿಬಿಟ್ರು, ಏನು ಶಾಂತವಾಗಿರೋದು?’ ನನ್ನ ಸಿಟ್ಟು ಸಿಕರವಾರರ ಮೇಲೆ ದಾಳಿ ಮಾಡಿತು.

‘ನಿಮಗೆ ಕೆಡುಕೆನಿಸುವುದು ಸಹಜ, ಇಂಥ ಪತ್ರ ಓದಿದ ಯಾರಿಗೇ ಆದರೂ ಕೆಡುಕೆನಿಸುತ್ತದೆ. ನೀವೀಗ ವಿವಾಹ ಮಾಡಿಕೊಳ್ಳಲು ಬಯಸದಿದ್ರೆ, ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ನೀವು ನಿಮ್ಮ ಮನೆಯನ್ನು ಬದಲಾಯಿಸಿ; ಆ ಮೊಹಲ್ಲಾದ ಜನ ಸ್ವಲ್ಪ ಗಡಿಬಿಡಿಯವರು ಅಂತ ನನಗನ್ನಿಸುತ್ತೆ.’ ಸಿಕರವಾರರು ನನಗೆ ಸಿಹಿಮಾತುಗಳಲ್ಲಿ ಸಲಹೆಯಿತ್ತರು. ಅವರು ನಿಸ್ಸಂದೇಹವಾಗಿ ನನಗೆ ಸಹಾಯ ಮಾಡಲು ಬಯಸುತ್ತಿದ್ದರು. ಆದರೆ ಸಹಾಯದ ರೂಪದಲ್ಲಿ ಅವರ ಪಾರಂಪರಿಕ ಸಲಹೆಗಳು ಬೆಂಕಿಗೆ ತುಪ್ಪ ಹಾಕಿದಂತಿದ್ದವು. ನಾನು ಒಳಗೊಳಗೆ ಅವಮಾನದ ಬೆಂಕಿಯಲ್ಲಿ ಉರಿಯುತ್ತಿದ್ದೆ. ಕೆಲವರು, ಹೀಗಾಗಿ ನಾನು ಮದುವೆಯಾಗಬೇಕು ಅಥವಾ ನನ್ನ ಮನೆಯನ್ನು ಬದಲಾಯಿಸಬೇಕು ಅಥವಾ ಅವರ ಮೊಹಲ್ಲಾವನ್ನು ಬಿಡಬೇಕು? ಎಂದು ಬಯಸುತ್ತಿದ್ದರು. ಇದು ಮಿತಿ ಮೀರಿತು! ವಾಸ್ತವಿಕವಾಗಿ ಇದು ಗಡಿಯಲ್ಲ, ಗಡಿಯನ್ನು ಮೀರುವ ವಿಷಯವಾಗಿತ್ತು.

‘ಯೋಚ್ನೆ ಮಾಡ್ತೀನಿ’, ನಾನು ನನ್ನ ವಿಚಾರಗಳಿಗೆ ವಿರೋಧವಾಗಿ ಉತ್ತರಿಸಿದೆ. ನಾನು ಸಿಕರವಾರರೊಂದಿಗೆ ಜಗಳವಾಡಲು ಬಯಸುತ್ತಿರಲಿಲ್ಲ. ಏನೇ ಆದರೂ, ಅವರು ನನ್ನ ಹಿರಿಯರಾಗಿದ್ದರು, ಅಕೌಂಟೆಂಟ್ ಆಗಿದ್ದರು. ಅಲ್ಲದೆ ಅವರ ಜೀವನದ ಅನುಭವದಂತೆ ಅವರು ಹೇಳುವುದು ತಪ್ಪು ಸಹ ಆಗಿರಲಿಲ್ಲ.